ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಸಂಖ್ಯೆ:ಎ6/ಅಸಂಕಾ/ಸಿಆರ್-34/2016-17

4621

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ,
ದಿನಾಂಕ: 07-02-2017.

ಇವರಿಗೆ,

ಕಾರ್ಯಪಾಲಕ ಇಂಜಿನಿಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಮಾನ್ಯರೆ,

ವಿಷಯ : ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಐಮಂಗಲ ಹಾಗೂ 37 ಇತರೆ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಕಾಮಗಾರಿಗೆ 0.8068 ಹೆಕ್ಟೇರ್ ಅರಣ್ಯ ಭೂಮಿಯನ್ನು ಮಾರ್ಪಡಿಸುವ ಬಗ್ಗೆ.

ಉಲ್ಲೇಖ : ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 16-11-2016, 16-12-2016 ಮತ್ತು 30-12-2016

<><><>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಈ ಕಛೇರಿ ಪತ್ರಗಳ ಕಡೆ ನಿಮ್ಮ ತುರ್ತು ಗಮನವನ್ನು ಸೆಳೆಯಲಾಗಿದೆ. ಸದರಿ ಪತ್ರಗಳಲ್ಲಿ ನೀವು ಸಲ್ಲಿಸಿರುವ ಮೇಲ್ಕಾಣಿಸಿದ ಅರಣ್ಯ ಸಂರಕ್ಷಣಾ ಕಾಯ್ದೆ-1980 ರ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ವೆ ನಂಬರುವಾರು ವಿಸ್ತೀರ್ಣವನ್ನು ನಕಾಶೆಗಳಲ್ಲಿ ಗುರುತಿಸಿ ಅಗತ್ಯ ದಾಖಲೆಗಳನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ-ವಿಭಾಗ, ಹಿರಿಯೂರು ಇವರಿಗೆ ಸಲ್ಲಿಸಲು ಸೂಚಿಸಲಾಗಿತ್ತು.

ಸದರಿ ವಿಷಯವಾಗಿ ನೀವು ಅಂತರ್ಜಾಲದಲ್ಲಿ ದಿನಾಂಕ: 30-01-2017 ರಂದು ಮಾಹಿತಿಯನ್ನು ಸಲ್ಲಿಸಿರುವುದಾಗಿ ನಮೂದಿಸಿರುತ್ತೀರಿ. ಆದರೆ ನೀವು ಅಂತರ್ಜಾಲದಲ್ಲಿ ನಮೂದಿಸಿದಂತೆ ಯಾವುದೇ ಮಾಹಿತಿಯನ್ನು ದಾಖಲೆಗಳೊಂದಿಗೆ ಈ ಕಛೇರಿಗಾಗಲಿ ಅಥವಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ-ವಿಭಾಗ, ಹಿರಿಯೂರು ಇವರಿಗೆ ಹಾರ್ಡ್ ಪ್ರತಿಗಳನ್ನು ಇದುವರೆವಿಗೂ ಸಲ್ಲಿಸಿರುವುದಿಲ್ಲ. ಇದರಿಂದ ಮೇಲ್ಕಾಣಿಸಿದ ಪ್ರಸ್ಥಾವನೆಗೆ ಸಂಬಂಧಿಸಿದಂತೆ ಪರಿಶೀಲನೆ ಮಾಡಲು ಸಾಧ್ಯವಾಗುವುದಿಲ್ಲ.

ಆದ್ದರಿಂದ ನೀವು ಅಂತರ್ಜಾಲದಲ್ಲಿ ನಮೂದಿಸಿದಂತೆ ದಾಖಲೆಗಳನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ-ವಿಭಾಗ, ಹಿರಿಯೂರು ಇವರಿಗೆ ಕೆಳಕಾಣಿಸಿದ ದಾಖಲೆಗಳನ್ನು ಎಂಟು ಪ್ರತಿಗಳಲ್ಲಿ ತುರ್ತಾಗಿ ಒದಗಿಸಿ ಈ ಕಛೇರಿಗೆ ಮಾಹಿತಿ ಒದಗಿಸಲು ಕೋರಿದೆ.

**ಸಲ್ಲಿಸಬೇಕಾದ ದಾಖಲೆಗಳು:**

1. ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಭೂ ಪರಿವರ್ತನೆಗೆ ಕೋರಿದ ಸರ್ವೆ ನಂಬರ್‌ವಾರು ವಿಸ್ತೀರ್ಣದ ಮಾಹಿತಿ.
2. ಭೂ ಪರಿವರ್ತನೆಗೆ ಕೋರಿದ ಪ್ರದೇಶವನ್ನು ಗ್ರಾಮ ನಕಾಶೆ ಹಾಗೂ ಟೋಪೋ ಶೀಟ್‌ನಲ್ಲಿ ಬಣ್ಣದಿಂದ ಗುರುತಿಸುವುದು.
3. ಭೂ ಪರಿವರ್ತನೆಗೆ ಕೋರಿದ ಅರಣ್ಯ ಪ್ರದೇಶಕ್ಕೆ ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಪರ್ಯಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಒದಗಿಸುವುದು.

4. ಭೂ ಪರಿವರ್ತನೆಗೆ ಕೋರಿದ ಪ್ರದೇಶಕ್ಕೆ Net Present Value, Lease Rent, Compensactory Afforestation ಮೊತ್ತವನ್ನು ಪಾವತಿಸುವ ಬಗ್ಗೆ ಹಾಗೂ ಸರ್ಕಾರವು ಕಾಲಕಾಲಕ್ಕೆ ವಿಧಿಸುವ ಷರತ್ತುಗಳಿಗೆ ಬದ್ಧವಿರುವುದಾಗಿ ಮುಚ್ಚಳಿಕೆ ಪತ್ರಗಳನ್ನು ಒದಗಿಸುವುದು.

ತಮ್ಮ ವಿಶ್ವಾಸಿ,
ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

<u>ಪ್ರತಿಯನ್ನು:</u>

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ), ಅರಣ್ಯ ಭವನ, ಬೆಂಗಳೂರು ಇವರ ಅವಗಾಹನೆಗೆ ಗೌರವಗಳೊಂದಿಗೆ ಸಲ್ಲಿಸಿದೆ.
2. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ಇವರ ಅವಗಾಹನೆಗೆ ಗೌರವಗಳೊಂದಿಗೆ ಸಲ್ಲಿಸಿದೆ.
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ–ವಿಭಾಗ, ಹಿರಿಯೂರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

14/2/17